ಅ) ಮೈಸೂರಿನಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಅಗತ್ಯವಾದ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ:

ಇ) ಮೈಸೂರಿನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೊಸದಾಗಿ ಹೂಡಿಕೆದಾರರು ಬಂದಿರುವರೇ (ಅವರುಗಳ ವಿವರ ನೀಡುವುದು)

ಈ) ಕಳೆದ ವರ್ಷ ಇಲ್ಲಿನ ಕೈಗಾರಿಕಾ ಬೆಳವಣಿಗೆಗಾಗಿ ಸರ್ಕಾರ ಎಷ್ಟು ಹಣ ವೆಚ್ಚ ಮಾಡಿದೆ: ಮುಂದೆ ಈ ಕುರಿತು ಎಷ್ಟು ವೆಚ್ಚ ಮಾಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಎ. ಮಾರುಕಟ್ಟೆಯಲ್ಲಿ ಪೈಪೋಟಿ

ಬಿ. ಕಾರ್ಮಿಕರ ಮುಷ್ಕರ

ಸಿ. ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆಯಲ್ಲಿ ಏರಿಳಿತ.

ಡಿ. ದುಡಿಮೆ ಬಂಡವಾಳದ ಕೊರತೆ

ಇ. ಆಡಳಿತ ವರ್ಗದಲ್ಲಿ ಹೊಂದಾಣಿಕೆ ಇಲ್ಲದಿರುವುದು

ಎಫ್. ಆಡಳಿತ ವರ್ಗಗಳಿಂದ ಹಣ ದುರುಪಯೋಗ

ಜಿ. ತಡವಾಗಿ ಹಣ ಪಾವತಿಗಳಾಗುತ್ತಿರುವುದು

ಆ) ಮೈಸೂರು ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಕೆ.ಐ.ಎ.ಡಿ.ಬಿ. ಮೈಸೂರು ಸಂಸ್ಥೆಯು ಕೈಗಾರಿಕಾ ಪ್ರದೇಶಗಳನ್ನು ಮಾಡಿ, ಪ್ಲಾಟ್‌ಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತಿರುತ್ತದೆ.

ಬಿ) ಕೆ.ಎಸ್.ಎಸ್.ಐ.ಡಿ.ಸಿ ಮೈಸೂರು ಸಂಸ್ಥೆಯು ಕೈಗಾರಿಕಾ ಪ್ರದೇಶಗಳನ್ನು ನಿರ್ಮಿಸಿ ಶೆಡ್ಡುಗಳನ್ನು ಹಂಚಿಕೆ ಮಾಡುತ್ತಿರುತ್ತದೆ.

ಇ) 2002–03 ಮತ್ತು 03–04ನೇ ಸಾಲುಗಳಲ್ಲಿ ಏಕಗವಾಕ್ಷಿ ಸಮಿತಿಯಲ್ಲಿ ರೂ. 4569.00 ಲಕ್ಷಗಳ ಬಂಡವಾಳ ಹೂಡಿಕೆಯೊಂದಿಗೆ 3 ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ. ಇವುಗಳಲ್ಲಿ 107 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಉನ್ನತ ಮಟ್ಟದ ಸಮಿತಿಯಲ್ಲಿ ರೂ. 500.00 ಕೋಟಿಗಳ ಬಂಡವಾಳ ಹೂಡಿಕೆಯೊಂದಿಗೆ 1 ಬೃಹತ್ ಪ್ರಮಾಣದ ಕೈಗಾರಿಕೆಯ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ 900 ಜನರಿಗೆ ಉದ್ಯೋಗಾವಕಾಶ ದೊರಕಲಿದೆ.

ಈ) ಎ) ಕೆಐಎಡಿಬಿ ಮೈಸೂರು ಸಂಸ್ಥೆಯು 2002–03ನೇ ಸಾಲಿನಲ್ಲಿ ರೂ. 59.00 ಲಕ್ಷಗಳನ್ನು ಕೈಗಾರಿಕಾ ಪ್ರದೇಶದಲ್ಲಿ ವೆಚ್ಚ ಮಾಡಿದೆ ಮತ್ತು 03–04ನೇ ಸಾಲಿನಲ್ಲಿ ರೂ. 74.50 ಲಕ್ಷಗಳನ್ನು ವೆಚ್ಚ ಮಾಡಲು ಅಂದಾಜು ಮಾಡಿದೆ.

ಬಿ) ಕೆ.ಎಸ್.ಎಸ್.ಐ.ಡಿ.ಸಿ. ಮೈಸೂರು ಸಂಸ್ಥೆಯು 02–03ನೇ ಸಾಲಿನಲ್ಲಿ ಯಾವುದೇ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿರುವುದಿಲ್ಲ. 03–04ನೇ ಸಾಲಿನಲ್ಲಿ ಶೆಡ್‌ಗಳನ್ನು 10 ಕೈಗಾರಿಕಾ ಪ್ಲಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಮೈಸೂರು ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳಲ್ಲಿನ ಸೌಲಭ್ಯಗಳು

4202 (4922) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರ/ತಾಲ್ಲೂಕಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳು ಯಾವುವು?

ಆ) ಸದರಿ ಹಾಸ್ಟೆಲ್‌ಗಳಲ್ಲಿ ವಸತಿ ಬಯಸಿ ಯಾವ ಯಾವ ತರಗತಿಯ ಎಷ್ಟೆಷ್ಟು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವರು; ಅವರುಗಳ ಪೈಕಿ ಎಷ್ಟೆಷ್ಟು ಮಂದಿಗೆ ವಸತಿ ನೀಡಲಾಗುವುದು?

ಇ) ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗಾಗಿ ನೀಡಲಾಗುತ್ತಿರುವ ಸೌಲಭ್ಯಗಳು ಯಾವುವು (ವಿವರ ನೀಡುವುದು)?

ಈ) ಸದರಿ ಹಾಸ್ಟೆಲ್‌ಗಳ ಸೌಲಭ್ಯ ಹೆಚ್ಚಿಸುವ ಬಗ್ಗೆ ಹಾಗೂ ಹೊಸದಾಗಿ ಇನ್ನೂ ಹೆಚ್ಚು ಹಾಸ್ಟೆಲ್ ತೆರೆಯುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಕೆಳಕಂಡಂತಿದೆ:

ಮೆಟ್ರಿಕ್–ಪೂರ್ವ ವಿದ್ಯಾರ್ಥಿ ನಿಲಯಗಳು

ಭೋಜನಾ ವೆಚ್ಚ	–	ಮಾಹೆಯಾನ ರೂ. 400/-
ಸಮವಸ್ತ್ರ	–	ವಾರ್ಷಿಕ ರೂ. 500/–
ಇತರೆ ವೆಚ್ಚ	–	ಮಾಹೆಯಾನ ರೂ. 40/–
ಕ್ಷೌರದ ವೆಚ್ಚ	–	ವಾರ್ಷಿಕ ರೂ. 50/–
ಪಠ್ಯ ಪುಸ್ತಕ ಮತ್ತು ಸ್ಟೇಷನರಿ ವೆಚ್ಚ	–	ವಾರ್ಷಿಕ ರೂ. 250/–
ಹಾಸಿಗೆ, ಹೊದಿಕೆ	–	3 ವರ್ಷಕ್ಕೊಮ್ಮೆ ರೂ. 400/–

ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು

ಭೋಜನಾ ವೆಚ್ಚ – ಮಾಹೆಯಾನ ರೂ. 450/– ಸರ್ಕಾರಿ ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಾರ್ತಾ ಪತ್ರಿಕೆ, ನಿಯತ ಕಾಲಿಕಗಳ ಜೊತೆಗೆ ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ನುರಿತ ನಿವೃತ್ತಿ ಹೊಂದಿರುವ ಅರೆಕಾಲಿಕ ಭೋದಕರುಗಳಿಂದ ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಾಮಾನ್ಯ ವಿಷಯಗಳ ಬಗ್ಗೆ ವಿಶೇಷ ತರಬೇತಿಯ ಸೌಲಭ್ಯ ಒದಗಿಸಲಾಗುತ್ತಿದೆ.

ಈ) ಈಗಾಗಲೇ ಸರ್ಕಾರವು ವಿದ್ಯಾರ್ಥಿನಿಲಯಗಳಿಗೆ ನೀಡಿರುವ ಸೌಲಭ್ಯಗಳೊಂದಿಗೆ ಹೆಚ್ಚುವರಿ ಸೌಲಭ್ಯಗಳಾದ ಸೋಲಾರ್ ಹೀಟಿಂಗ್/ಲೈಟಿಂಗ್, ಅಡುಗೆ ಅನಿಲ ಸಂಪರ್ಕ, ಟೆಲಿವಿಷನ್, ಕಂಪ್ಯೂಟರ್, ಲೈಬ್ರರಿ ಮತ್ತು ಕ್ರೀಡಾ ಸಾಮಗ್ರಿಗಳನ್ನು ಹಂತಹಂತವಾಗಿ ವಿದ್ಯಾರ್ಥಿನಿಲಯಗಳಿಗೆ ಒದಗಿಸಲು ಹಾಗೂ ಹೊಸದಾಗಿ ಪ್ರಾರಂಭಿಸಲಾಗುವ ವಿದ್ಯಾರ್ಥಿನಿಲಯಗಳಿಗೆ ಮೇಲಿನ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4922ಕ್ಕೆ ಅನುಬಂಧ

ಕ್ರ.ಸ ಸಂ.	ವಿದ್ಯಾರ್ಥಿನಿಲಯದ ಹೆಸರು	ಮಂಜೂರಾತಿ ಸಂಖ್ಯೆ	ಪ್ರವೇಶ ಕೋರಿ ಬಯಸಿ ಬಂದ ಅರ್ಜಿಗಳ ವಿವರ						ಪ್ರವೇಶಾವಕಾಶ ನೀಡಿದ ಅರ್ಜಿಗಳ ವಿವರ					
			5ನೇ ತರಗತಿ	6ನೇ ತರಗತಿ	7ನೇ ತರಗತಿ	8ನೇ ತರಗತಿ	9ನೇ ತರಗತಿ	10ನೇ ತರಗತಿ	5ನೇ ತರಗತಿ	6ನೇ ತರಗತಿ	7ನೇ ತರಗತಿ	8ನೇ ತರಗತಿ	9ನೇ ತರಗತಿ	10ನೇ ತರಗತಿ
1. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು														
1.	ನಜರಬಾದ್, ಮೈಸೂರು	270	13	22	11	86	1	11	6	10	7	50	3	3
2.	ವಿ.ವಿ. ಮೊಹಲ್ಲಾ–1 (ಬಾಲಕ)	150	12	14	3	33	7	4	8	18	4	32	7	4
3.	ವಿ.ವಿ. ಮೊಹಲ್ಲಾ–2 (ಬಾಲಕ)	50	3	5	2	7	1	0	2	2	0	7	8	0
4.	ಜಯಪುರ	50	2	6	1	7	3	0	2	6	1	7	3	0
5.	ಎಸ್. ಕಲ್ಲಳ್ಳಿ	50	4	6	0	0	0	0	4	6	8	0	0	0
6.	ಕಡಕೊಳ	50	3	0	0	7	1	4	1	0	0	4	0	3
7.	ಕೀಳನಪುರ	50	4	5	1	5	1	2	4	5	1	5	1	1
	ಒಟ್ಟು	670	41	56	18	145	21	21	27	47	13	105	14	11

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು

ಕ್ರ.ಸ ಸಂ.	ವಿದ್ಯಾರ್ಥಿನಿಲಯದ ಹೆಸರು	ಮಂಜೂ ರಾತಿ ಸಂಖ್ಯೆ	ಪ್ರವೇಶ ಕೋರಿ ಬಯಸಿ ಬಂದ ಅರ್ಜಿಗಳ ವಿವರ						ಪ್ರವೇಶಾವಕಾಶ ನೀಡಿದ ಅರ್ಜಿಗಳ ವಿವರ					
			1ನೇ ಪಿಯುಸಿ	2ನೇ ಪಿಯುಸಿ	ಪದವಿ 1ನೇ ವರ್ಷ	ಪದವಿ ವರ್ಷ	ಪದವಿ ವರ್ಷ	ಟಿ.ಸಿ.ಹೆಚ್. ಬಿಎಡ್. ತಾಂತ್ರಿಕ ಕಾನೂನು ವೈದ್ಯಕೀಯ	1ನೇ ಪಿಯುಸಿ	2ನೇ ಪಿಯುಸಿ	ಪದವಿ 1ನೇ ವರ್ಷ	ಪದವಿ 2ನೇ ವರ್ಷ	ಪದವಿ 3ನೇ ವರ್ಷ	ಟಿ.ಸಿಹೆಚ್.ಬಿ.ಎಡ್. ತಾಂತ್ರಿಕ ಕಾನೂನು ವೈದ್ಯಕೀಯ
1.	ವಿ.ವಿ. ಮೊಹಲ್ಲಾ ದಾ..	150	79	12	31	1	1	0	29	2	18	1	0	0
2.	ಪಿಯುಸಿ ಬಾಲಕರು	100	95	18	0	0	0	0	54	6	0	0	0	0
3.	ಬೋಗಾದಿ, ಮೈಸೂರು ವೃತ್ತಿಪರ ಬಾಲಕರು ಮೈಸೂರು	50	0	0	0	0	0	0	0	0	0	0	0	0
4.	ವರ್ಗೀಕೃತ ಬಾಲಕರು ಮೈಸೂರು	50	0	0	0	0	0	0	0	0	0	0	0	0
5.	ವೃತ್ತಿಪರ ಬಾಲಕಿಯರು ಮೈಸೂರು	50	0	0	0	0	0	0	0	0	0	0	0	0
6.	ವೈದ್ಯಕೀಯ/ ತಾಂತ್ರಿಕ ಮೈಸೂರು	50	0	0	0	0	0	0	0	0	0	0	0	0
	ಒಟ್ಟು	450	174	30	31	1	1	0	83	8	18	1	0	0